# ಅರ್ಜಿ ಫಾರಂ ಭರ್ತಿ ಮಾಡುವ ವಿಧಾನ

ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಲೇಖನಿ ಬಳಸಿ ದೊಡ್ಡ ಅಕ್ಷರಗಳಲ್ಲಿ ಸ್ಪಷ್ಟವಾಗಿ ಬರೆದು ಅರ್ಜಿಯನ್ನು ಭರ್ತಿ ಮಾಡಬೇಕು. ಮೂಲ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು ಈ ಕೆಳಗೆ ತಿಳಿಸಿದಂತಹ ಭರ್ತಿ ಸಲಹೆಗಳನ್ನು ನೋಡಿಕೊಳ್ಳುವುದು.

1. ಅಭ್ಯರ್ಥಿಗಳು ಪ್ರವೇಶ ಬಯಸುವ ಕೇಂದ್ರಗಳಲ್ಲಿ ಆದ್ಯತೆಯನ್ನು ಆಧರಿಸಿ ಕೇಂದ್ರದ ಮಹಾವಿದ್ಯಾಲಯದ ಹೆಸರನ್ನು ಬರೆಯುವುದು. ಎರಡು ಕೇಂದ್ರಗಳಿಗೂ ಆದ್ಯತೆಯನ್ನು ಸೂಚಿಸುವುದು.
2. **<u>ಅರ್ಜಿದಾರರ ಪೂರ್ಣ ಹೆಸರು ಹಾಗೂ ವಿಳಾಸ:</u>** ನಿಮ್ಮ ಹೆಸರನ್ನು ಎಸ್ಎಸ್ಎಲ್‌ಸಿ/ತತ್ಸಮಾನ ಪರೀಕ್ಷೆಯ ದಾಖಲೆಗಳಲ್ಲಿರುವಂತೆ ಬರೆಯಬೇಕು ಹಾಗೂ ಕೊಟ್ಟಿರುವ ಸ್ಥಳದಲ್ಲಿ ಅಭ್ಯರ್ಥಿಗಳು ಪತ್ರ ವ್ಯವಹಾರ ಶೀಘ್ರವಾಗಿ ತಲುಪುವಂತೆ ತಮ್ಮ ಸಂಪೂರ್ಣ ಅಂಚೆ ವಿಳಾಸವನ್ನು ಬರೆಯಬೇಕು. ಊರಿನ ಹೆಸರು ಹಾಗೂ ಸಂಪೂರ್ಣ ಪಿನ್ ಕೋಡನ್ನು ಕಡ್ಡಾಯವಾಗಿ ಬರೆಯಲೇಬೇಕು.

   **<u>ಆಧಾರ ಸಂಖ್ಯೆ :</u>** ಭಾರತ ಸರ್ಕಾರ ಒದಗಿಸಿರುವ 12 ಅಂಕಿಯ ಆಧಾರ ಸಂಖ್ಯೆಯನ್ನು ಬರೆಯಬೇಕು

   **<u>ಮೊಬೈಲ್ ಸಂಖ್ಯೆ</u> :** ಕೊಟ್ಟಿರುವ ಚೌಕಟ್ಟಿನಲ್ಲಿ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ಬರೆಯಬೇಕು
3. **ಜನ್ಮ ದಿನಾಂಕ:** ಎಸ್.ಎಸ್.ಎಲ್.ಸಿ./ ತತ್ಸಮಾನ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ಜನ್ಮ ದಿನಾಂಕವನ್ನು ಬರೆಯಬೇಕು
4. **ವಯಸ್ಸು ದಿ:30.09.2020ಕ್ಕೆ :** ದಿನಾಂಕಕ್ಕೆ ಪೂರ್ಣಗೊಂಡ ವಯಸ್ಸನ್ನು ನಮೂದಿಸುವುದು. (**ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು ದಿನಾಂಕ:30.09.2020 ರಂದು 25 ವರ್ಷಗಳನ್ನು ಮೀರಿರಬಾರದು**).
5. **ಲಿಂಗ:** ಕೊಟ್ಟಿರುವ ಚೌಕಟ್ಟಿನಲ್ಲಿ ಗಂಡಾಗಿದ್ದಲ್ಲಿ ನಿಗದಿತ ಚೌಕಟ್ಟಿನಲ್ಲಿ ✓ ಮಾಡುವುದು; ಹೆಣ್ಣಾಗಿದ್ದಲ್ಲಿ ನಿಗದಿತ ಚೌಕಟ್ಟಿನಲ್ಲಿ ✓ ಮಾಡುವುದು.
6. **ಮಾತೃ ಭಾಷೆ:** ನಿಮ್ಮ ಶಾಲೆಯ ದಾಖಲೆಗಳಲ್ಲಿರುವಂತೆ ನಿಮ್ಮ ಮಾತೃ ಭಾಷೆಯನ್ನು ಬರೆಯಬೇಕು
7. **ರಾಷ್ಟ್ರೀಯತೆ** : ನಿಮ್ಮ ರಾಷ್ಟ್ರೀಯತೆಯನ್ನು ನಮೂದಿಸುವುದು
8. **ಪಾಲಕರ ವಿವರ:** (ಹೆಸರು, ಉದ್ಯೋಗ ಮತ್ತು ವರಮಾನ (ವಾರ್ಷಿಕ)): ನಿಮ್ಮ ತಂದೆಯ/ ತಾಯಿ/ ಪಾಲಕರ (ತಂದೆ ತಾಯಿ ಇಲ್ಲದಿದ್ದಲ್ಲಿ) ಹೆಸರನ್ನು 10ನೇ ತರಗತಿಯ ದಾಖಲೆಗಳಲ್ಲಿರುವಂತೆ ಬರೆಯಬೇಕು. ನಿಮ್ಮ ತಂದೆ ತಾಯಿಗಳ ಎಲ್ಲಾ ಮೂಲಗಳಿಂದ ಒಟ್ಟು ವಾರ್ಷಿಕ ಆದಾಯವನ್ನು ನಿಗದಿಪಡಿಸಿದ ಚೌಕಟ್ಟಿನಲ್ಲಿ ನಮೂದಿಸಿ.
9. **ಮೀಸಲಾತಿಯ ಪ್ರವರ್ಗ:** ಮೀಸಲಾತಿ ಸೌಲಭ್ಯ ಬಯಸುವ ಎಲ್ಲ ಅಭ್ಯರ್ಥಿಗಳು ಪ್ರವೇಶಾತಿ ಸಮಯದಲ್ಲಿ ಜಾತಿ/ಆದಾಯಗಳ ಮೂಲ ಪ್ರಮಾಣ ಪತ್ರಗಳನ್ನು ಒದಗಿಸಬೇಕು. ಜಾತಿ/ಪ್ರವರ್ಗ ಮತ್ತು ಆದಾಯ ಪ್ರಮಾಣ ಪತ್ರಗಳು ಅರ್ಜಿ ನಮೂನೆಯಲ್ಲಿ ನಮೂದಿಸಿದಂತೆಯೇ ಇರಬೇಕು. ಕೊಟ್ಟಿರುವ ಚೌಕಟ್ಟಿನಲ್ಲಿ ದಾಖಲೆಗಳ ಅನುಸಾರ ನಿಗದಿತ ಜಾಗದಲ್ಲಿ ✓ ಮಾಡುವುದು
10. **ವಿಶೇಷ ಗುಂಪಿನ ಮೀಸಲಾತಿ:** ವಿಶೇಷ ಗುಂಪಿನ ಮೀಸಲಾತಿ ಪಡೆಯುವ ಅಭ್ಯರ್ಥಿಗಳು ಕೊಟ್ಟಿರುವ ಚೌಕಟ್ಟಿನಲ್ಲಿ ದಾಖಲೆಗಳ ಅನುಸಾರ ನಿಗದಿತ ಜಾಗದಲ್ಲಿ ✓ ಮಾಡುವುದು ಹಾಗೂ ಸೂಕ್ತ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

11. **ಹೈದರಾಬಾದ್-ಕರ್ನಾಟಕ ಪ್ರಾಂತ್ಯದ ಸ್ಥಳೀಯ ಮೀಸಲಾತಿ ವ್ಯಾಪ್ತಿಯಲ್ಲಿ ಬರುವಿರಾ?:** ಹೈದರಾಬಾದ್-ಕರ್ನಾಟಕ ಪ್ರಾಂತ್ಯದ ಸ್ಥಳೀಯ ಮೀಸಲಾತಿ ವ್ಯಾಪ್ತಿಯಲ್ಲಿ **ಅರ್ಹರಿದ್ದಲ್ಲಿ**, ಹೌದು ಎಂದು ನಿಗದಿತ ಜಾಗದಲ್ಲಿ ✓ ಮಾಡುವುದು. ಹಾಗೂ ಸಂಬಂಧಪಟ್ಟ ಸಹಾಯಕ ಆಯುಕ್ತರಿಂದ ಪಡೆದ ಸೂಕ್ತ ಪ್ರಮಾಣ ಪತ್ರವನ್ನು ಲಗತ್ತಿಸಿರಿ.

12. **ಕೃಷಿಕರ ಕೋಟಾದಡಿಯಲ್ಲಿ ಪ್ರವೇಶ ಬಯಸುವಿರಾ?:** ಹೌದಾದಲ್ಲಿ ನಿಗದಿತ ಜಾಗದಲ್ಲಿ ✓ ಮಾಡುವುದು ಹಾಗೂ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಸೂಕ್ತ ಪ್ರಮಾಣ ಪತ್ರದೊಂದಿಗೆ ವಿವರಣಾ ಮತ್ತು ಪುಸ್ತಕದಲ್ಲಿ ನಮೂದಿಸಿದಂತೆ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಲಗತ್ತಿಸಿರಿ.

13. ಎಸ್ಎಸ್ಎಲ್ಸಿ/ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ವಿವರ (ಅಂಕಪಟ್ಟಿಯನ್ನು ಲಗತ್ತಿಸಿರಿ): ಈ ಕೆಳಗಿನಂತೆ ನಿಗದಿತ ಸ್ಥಳದಲ್ಲಿ ಅಂಕಗಳ ವಿವರಗಳನ್ನು ನಮೂದಿಸುವುದು. ಮೂಲ ಎಸ್.ಎಸ್.ಎಲ್.ಸಿ ಅಂಕಪಟ್ಟಿ ವಿತರಣೆಯಾಗದಿದ್ದಲ್ಲಿ ತಾವು ಉತ್ತೀರ್ಣರಾದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ಅಂಕಪಟ್ಟಿಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.

| ಒಟ್ಟು ಅಂಕಗಳು | ಪಡೆದ ಅಂಕಗಳು | ಪ್ರತಿಶತ (%) |
|---|---|---|
| 625 | 501 | 80.16% |

14. ಅರ್ಜಿ ಶುಲ್ಕದ ವಿವರ : ಅಧಿಸೂಚನೆಯಲ್ಲಿ ನಮೂದಿಸಿದಂತೆ ಅನ್ವಯವಾಗುವ ನಿಗದಿತ ಶುಲ್ಕವನ್ನು ಭರಿಸಿ ಮಾಹಿತಿಯನ್ನು ಈ ಕೆಳಗಿನಂತೆ ತುಂಬಿ, ಅರ್ಜಿಯೊಂದಿಗೆ ವಿಶ್ವವಿದ್ಯಾಲಯದ ಬ್ಯಾಂಕ ಚಲನ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು

| **ಬ್ಯಾಂಕಿನ ಹೆಸರು ಮತ್ತು ಶಾಖೆ** | **ಚಲನ್ ಸಂಖ್ಯೆ & ದಿನಾಂಕ** | **ಪಾವತಿಸಿದ ಮೊತ್ತ** |
|---|---|---|
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನವನಗರ, ಬಾಗಲಕೋಟ | 56984, 10.09.2020 | ₹560/- |